

ಪೆಂಡೆಂಟ್‌ನ ಮಧ್ಯ ಮೇಲ್ಭಾಗದಲ್ಲಿ ಒಂದು ಹುಕ್ ಇರುತ್ತದೆ. ಅದಕ್ಕೆ ಮುತ್ತಿನ ಸರ ಬೇರೆ ಮೂರು ಬಳೆ ಸರ ಯಾವುದಾದರೂ ಜೋಡಿಸಿ ಕೂಡ ಧರಿಸಬಹುದು. ಪೆಂಡೆಂಟ್‌ನ ಮಧ್ಯ ಭಾಗದಲ್ಲಿ ಎರಡು ಬದಿಗೆ ಇರುವ ಹುಕ್‌ಗೆ ಚೈನು ಸೇರಿಸಿದರೆ ಅದು ತೋಳ್ಬಂದಿ ಆಗುತ್ತದೆ. ಉದ್ದನಾಗಿ ಚೈನನ್ನು ಪೋಣಿಸಿದರೆ ಸೊಂಟದ ಪಟ್ಟಿ ಆಗುತ್ತದೆ. ಕೊನೆಯಲ್ಲಿ ಉದ್ದ ಸಾಕಾಗದಿದ್ದರೆ ರಿಂಗ್ ಚೈನನ್ನು ಸೇರಿಸಿ ಉದ್ದ ಮಾಡಿಕೊಂಡರಾಯಿತು. ಬೇಕಾದಲ್ಲಿ ಪೆಂಡೆಂಟನ್ನು ಮುಂದಲೆ ಅಥವಾ ಬೈತಲೆ ಬೊಟ್ಟು ತರನಾಗಿಯೂ ಪಿನ್ ಬಳಸಿ ಧರಿಸಬಹುದು.

ಚೈನುಗಳಲ್ಲಿ ಎರಡೂ ಬದಿ ಬೇರೆ ಬೇರೆ ಡಿಸೈನ್ (ವಿನ್ಯಾಸ) ಇರುವುದೂ ಬರುತ್ತದೆ. ಅದನ್ನೂ ಬಹಳ ರೀತಿಯಲ್ಲಿ ಬಳಸಬಹುದು. ಒಂದು ಭಾಗದಲ್ಲಿ ಚಿನ್ನದ ವಿನ್ಯಾಸವಿದ್ದರೆ ಇನ್ನೊಂದು ಭಾಗದಲ್ಲಿ ಎಮರಾಲ್ಡ್, ರೂಬಿ ಹರಳುಗಳನ್ನು ಹೊಂದಿದ ಚಿತ್ತಾರವಿದ್ದರೆ ಸೀರೆ, ಲೆಹಂಗಾದಂತಹ ಉಡುಪುಗಳಿಗೆ ಮ್ಯಾಚಿಂಗ್ ಮಾಡಿಕೊಂಡು ಧರಿಸಬಹುದು.

ಈಗೀಗ ತಲೆಗೂದಲಿಗೆ ಸುಂದರವಾದ ಕೇಶ ವಿನ್ಯಾಸ ಮಾಡಿ ಅಲ್ಲೂ ಆಭರಣ ಧರಿಸುತ್ತಾರೆ. ಅದಕ್ಕೂ ಈ ಆಭರಣ ಹೊಂದಿಕೊಳ್ಳುತ್ತದೆ. ಇದಕ್ಕೆ 10 ಇನ್ ವನ್ ಅಥವಾ 5 ಇನ್ ವನ್ ಆಭರಣ ಎಂದು ಹೆಸರು. ಬೇಕಾದಲ್ಲಿ ಒಂದೆರಡು ಚಿಕ್ಕದು ದೊಡ್ಡದಾಗಿರುವ ಹರಳುಗಳನ್ನು ಒಳಗೊಂಡಿರುವ ಪೆಂಡೆಂಟ್‌ಗಳಿಗೆ ಇದೇ ಸರದಲ್ಲಿ ಇದ್ದಂತೆ 3 ಜಾಗದಲ್ಲಿ ಹುಕ್‌ಗಳನ್ನು ಮಾಡಿಸಿಕೊಂಡರೆ ಅದನ್ನು ಅಳವಡಿಸಿ ವಿಧ ವಿಧ ರೀತಿಯಲ್ಲಿ ಧರಿಸಬಹುದು. ಮಲ್ಟಿಪರ್ಪಸ್ ಒಡವೆಗಳು ಫ್ಯಾಷನಬಲ್ ಆಗಿಯೂ ಇರುತ್ತದೆ, ಹತ್ತಾರು ಒಡವೆಗಳನ್ನು ಖರೀದಿಸುವ ಅಗತ್ಯವೂ ಇಲ್ಲ.

(ಚಿತ್ರಗಳು: ಮುಳಿಯ ಕೇಶವ ಭಟ್ & ಸನ್ಸ್)



## ಕತ್ತನ್ನು ಬಿಗಿದಪ್ಪುವ 'ಚೋಕರ್'

ನೆಕ್ಲೇಸ್ ಅನ್ನೇ ಹೋಲುವ ಆದರೆ ಕುತ್ತಿಗೆಗೆ ಫಿಟ್ ಆಗಿರುವ ಸುಂದರ ಆಭರಣ ಚೋಕರ್. ರೇಷ್ಮೆ ಸೀರೆ ಉಟ್ಟಾಗ ಹತ್ತಾರು ಒಡವೆಗಳನ್ನು ತೊಡುವ ಬದಲು ಒಂದೇ ಒಂದು ಚೋಕರ್ ಸಖತ್ ಲುಕ್ ಕೊಡುತ್ತದೆ. ಬಂಗಾರದ ಚೋಕರ್‌ನಲ್ಲಿ ಹಲವು ವೈವಿಧ್ಯದವು ಇದೀಗ ಲಭ್ಯ.

ಚಿನ್ನದ ಮೇಲೆ ಕುಂದನ್, ಹರಳು, ಮುತ್ತು, ಕೆಂಪು, ಜೇಡ್, ಮುತ್ತುಗಳನ್ನು ಕೂರಿಸಿ ಮಾಡಿದ ಚೋಕರ್‌ಗಳೂ ಬಹುಬೇಡಿಕೆ ಪಡೆದಿವೆ. ಹಾಗೆಂದು ಚೋಕರ್ ಫ್ಯಾಷನ್ ಜಗತ್ತಿಗೆ ಕಾಲಿಟ್ಟದ್ದು ಇಂದು ನಿನ್ನೆಯಲ್ಲ. ಅಜ್ಜಿಯರ ಕಾಲದಿಂದಲೂ ಚೋಕರ್ ಬಳಕೆಯಲ್ಲಿದೆ.



ಹಿಂದೆ ಅಜ್ಜಿಯರು ಚೋಕರ್ ಬಳಸುತ್ತಿದ್ದುದು ಮದುವೆಯಂತಹ ಶುಭ ಸಮಾರಂಭಕ್ಕೆ ಮಾತ್ರ. ಚಿನ್ನದಿಂದಲೇ ತಯಾರಿಸಿ ಒಳಗೆ ಟೊಳ್ಳಾಗಿರುವ ಭಾಗಕ್ಕೆ ಅರಗನ್ನು ತುಂಬಿ ಮಾಡಿದ ಚೋಕರ್‌ಗಳು ಸಖತ್ ಲುಕ್ ಕೊಡುತ್ತಿದ್ದವು. ಇದು ಗೆಜ್ಜೆ ಮಾಲಾಕ್ ಅನ್ನೇ ಹೋಲುವುದಾದರೂ ಚೋಕರ್‌ಗಳು ಪುಟ್ಟ ಹುಡುಗಿಯಿಂದ ಹಿಡಿದು ವಯಸ್ಸಾದವರೆಗೆ ಎಲ್ಲರೂ ಧರಿಸುತ್ತಿದ್ದರು. ಈಗೀಗ ಮದುಮಗಳು, ಸಿನಿಮಾ ತಾರೆಯರು, ಮಾಡೆಲ್‌ಗಳು ಕೂಡ ಚೋಕರ್ ಅನ್ನೇ ಇಷ್ಟಪಟ್ಟು ಧರಿಸುತ್ತಿದ್ದಾರೆ.

ಈಗ ಫ್ಯಾಷನ್ ಪ್ರಪಂಚದಲ್ಲಿ ಚೋಕರ್‌ಗಳದ್ದೇ ಕಾರುಬಾರು. ದುಬಾರಿ ಚಿನ್ನದ ಚೋಕರ್ ಅನ್ನೇ ಹೋಲುವ ಚೋಕರ್‌ಗಳು ಕೃತಕ ಆಭರಣದಲ್ಲೂ ಲಭ್ಯ. ಕುತ್ತಿಗೆಯ ಸುತ್ತ ಬಿಗಿಯಾಗಿ ಸುತ್ತಿಕೊಳ್ಳುವ ಈ ಆಭರಣದ ಹಿಂಭಾಗವನ್ನು ದಾರದಿಂದ ಸುತ್ತಿ ಬಳಸುವುದೂ ಪದ್ಧತಿ.

ಮಹಿಳೆಯರು ಅವರವರ ದೇಹ ಪ್ರಕೃತಿಗೆ ಅನುಗುಣವಾಗಿ ಚೋಕರ್‌ಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಕತ್ತು ಉದ್ದ ಇದ್ದರೆ ಅಂಥವರಿಗೆ ಮುತ್ತು ರತ್ನಗಳಿಂದ ಕೂಡಿದ ಚೋಕರ್ ಚೆನ್ನಾಗಿ ಕಾಣುತ್ತದೆ. ತೆಳ್ಳಗೆ ಇರುವವರೂ ಇದೇ ರೀತಿಯ ಚೋಕರ್ ಆಯ್ದುಕೊಳ್ಳಬಹುದು. ದಪ್ಪ ಇರುವವರು ಸಪೂರವಾಗಿರುವ ಚೋಕರ್ ಧರಿಸಿದರೆ ಚೆನ್ನಾಗಿರುತ್ತದೆ. ಮುಖ ಅಗಲ ಇರುವ ಮಹಿಳೆಯರು ಯಾವುದೇ ರೀತಿಯ ಚೋಕರ್‌ಗಳನ್ನೂ ಆಯ್ದುಕೊಳ್ಳಬಹುದು.

ಚೋಕರ್‌ಗಳಲ್ಲಿ ಹಲವು ವೈವಿಧ್ಯಗಳಿವೆ. ಹೀಗಾಗಿ ರೇಷ್ಮೆ ಸೀರೆ ಉಟ್ಟರೆ ಸೀರೆಯ ಬಣ್ಣಕ್ಕೆ ಒಪ್ಪುವ ಚೋಕರ್ ಆಯ್ದುಕೊಂಡು ಮ್ಯಾಚ್ ಮಾಡಿಕೊಳ್ಳಬಹುದು. ಪ್ಲಾಸ್ಟಿಕ್, ಫೈಬರ್, ಇಮಿಟೇಟಿಂಗ್ ಜ್ಯುವೆಲ್ಲರಿಗಳಲ್ಲೂ ಹತ್ತು ಹಲವು ವಿನ್ಯಾಸಗಳ ಚೋಕರ್‌ಗಳು ಲಭ್ಯವಿರುವುದರಿಂದ ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಳ್ಳಲೂ ಚೋಕರ್‌ಗಳು ಸೂಕ್ತವಾದವು.

■ ಯು.ಎ.